ಓ.ಎಸ್.ನಂ.204/2020

ಪಿ ಡಬ್ಲ್ಯೂಃ 1

ದಿನಾಂಕ 01.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ವಾದಿ ಪರ ವಕೀಲರನ್ನು ಕೂಗಿ ಕರೆಸಿದ್ದು ಗೈರುಹಾಜರಿರುತ್ತಾರೆ.

**2.** ನನ್ನ ತಂದೆಯ ಹೆಸರು ಕರಿಯಪ್ಪ. ತಾಯಿಯ ಹೆಸರು ಹುಚ್ಚಮ್ಮ. ಅವರುಗಳಿಗೆ ನಾನು ಮತ್ತು 2 ನೇ ಪ್ರತಿವಾದಿ ಮಾತ್ರ ಮಕ್ಕಳಿರುತ್ತೇವೆ. ನನ್ನ ತಂದೆ ಮೂಲತಃ ಹರನಗಿರಿಯವರೇ ಆಗಿರುತ್ತಾರೆ. ತಾಯಿಯ ತವರು ಮನೆ ಚಿಕ್ಕಹರಳಹಳ್ಳಿ ಆಗಿರುತ್ತದೆ. ನನ್ನ ತಂದೆ ಸಹೋದರರು ಹರನಗಿರಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ನನ್ನ ತಾಯಿ ವಿವಾಹದ ನಂತರ ಗಂಡನ ಮನೆಯಲ್ಲಿ ವಾಸ ಇರುತ್ತಾರೆ. ಆಕೆಯು ನಾವಿಬ್ಬರೂ ಜನಿಸಿದ ನಂತರ ಹರನಗಿರಿಯಲ್ಲಿ ಸ್ವತಃ ಬೇರೆ ಮನೆ ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಅಲ್ಪವಯಿಗಳು ಇದ್ದು ಆಕೆಯೇ ನೋಡಿಕೊಂಡಿರುತ್ತಾಳೆ ಎಂದರೆ ಸರಿ. ನಮ್ಮ ಜೀವನ ನಿರ್ವಹಣೆ ಮತ್ತು ವಿವಾಹದ ಖರ್ಚನ್ನು ಆಕೆಯೇ ನೋಡಿಕೊಂಡಿರುತ್ತಾಳೆ ಎಂದರೆ ಸರಿ. ಆಕೆಯು ಕೂಲಿ ಕೆಲಸದ ಜೊತೆ ನೇಕಾರಿಕೆ ಕೆಲಸ ಮಾಡಿಕೊಂಡಿದ್ದಳು.

**3.** ನನ್ನನ್ನು ಹರನಗಿರಿ ಗ್ರಾಮದವರಿಗೆ ವಿವಾಹ ಮಾಡಿಕೊಟ್ಟರುತ್ತಾರೆ. ನನ್ನ ಮತ್ತು 2 ನೇ ಪ್ರತಿವಾದಿಯ ಮದುವೆ ಕಾಲಕ್ಕೆ ಬಂಗಾರ, ಹಣ, ಪಾತ್ರೆ ಮತ್ತು ಬಟ್ಟೆಗಳ ಖರ್ಚುಗಳನ್ನು ನನ್ನ ತಾಯಿಯೇ ನೋಡಿಕೊಂಡಿರುತ್ತಾಳೆ ಎಂದರೆ ಸರಿ. ನನ್ನ ಗಂಡನ ಮನೆಯಲ್ಲಿ ಒಂದು ಎಕರೆ ಜಮೀನು ಮತ್ತು ಮನೆ ಇರುತ್ತದೆ. ನಮ್ಮ ತಂದೆಗೆ ಯಾವುದೇ ಆಸ್ತಿ ಇರಲಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಈ ದಾವೆಗೆ ಮಾಹಿತಿಯನ್ನು ನನ್ನ ಮಗ ನೀಡಿರುತ್ತಾರೆ ಎಂದರೆ ಸರಿ. ನಾನು ಆ ಕಾರಣ ವಾದ ಪತ್ರಕ್ಕೆ ಮತ್ತು ಸಾಕ್ಷಿ ವಿಚಾರಣಾ ಪ್ರಮಾಣ ಪತ್ರಕ್ಕೆ ಯಾವುದೇ ಮಾಹಿತಿ ನಿಡಿರುವುದಿಲ್ಲ ಎಂದರೆ ಸಾಕ್ಷಿಯು ನನ್ನನ್ನು ಕೇಳಿ ಮಗ ತಿಳಿಸಿರುವುದಾಗಿ ನುಡಿಯುತ್ತಾರೆ.

**4.** ದಾವಾ ಆಸ್ತಿಯು ಚಿಕ್ಕಹರಳಹಳ್ಳಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು 3 ಎಕರೆ 38 ಗುಂಟೆ ವಿಸ್ತೀರ್ಣ ಇರುತ್ತದೆ. ಸದರಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಮತ್ತು 2 ನೇ ಪ್ರತಿವಾದಿಯು ಸಹ ದುಡಿದು ಹಣ ನೀಡಿರುವುದಾಗಿ ನುಡಿಯುತ್ತಾರೆ. ನನ್ನ ಜನ್ಮ ದಿನಾಂಕ ಮತ್ತು ವರ್ಷ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖರೀದಿಯ ಸಮಯದಲ್ಲಿ ನಾನು ಚಿಕ್ಕವಳಿದ್ದು ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

**5.** ನನ್ನ ತಂದೆ ಮತ್ತು ತಾಯಿ ನಮ್ಮ ಮನೆಯಲ್ಲೆ ಮರಣ ಹೊಂದಿದ್ದು ದಿನಾಂಕ ಗೊತ್ತಿಲ್ಲ. ದಾವಾ ಆಸ್ತಿಯನ್ನು ನನ್ನ ತಾಯಿ 1969 ರಲ್ಲಿ ಫಕೀರಪ್ಪ ನೆಗಳೂರು ರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮೂಲ ವಿಸ್ತೀರ್ಣ 7 ಎಕರೆ ಎಂದರೆ ಸರಿ. ದಾವಾ ಆಸ್ತಿಯ ಮಾರಾಟದ ನಂತರ ಉಳಿದ ಭಾಗದ ಆಸ್ತಿಯನ್ನು ಫಕೀರಪ್ಪನೇ ಹೊಂದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಖರೀದಿಯ ನಂತರ ಕಂದಾಯ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಆಗಿರುತ್ತವೆ ಎಂದರೆ ಸರಿ. ಅಂದಿನಿಂದ ಈ ದಾವಾ ಹೂಡುವ ಸಮಯದವರೆಗೂ ಸದರಿ ದಾಖಲೆಗಳು ಆಕೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ.

**6.** 1980 ರಿಂದ 2016 ರ ವರೆಗೆ 1 ನೇ ಪ್ರತಿವಾದಿಗೆ ಕಾಯಿಲೆ ಇದ್ದು ಆಸ್ಪತ್ರೆಗೆ ಹೋಗಿ ಬರುತ್ತಿದ್ದಳು ಎಂದರೆ ಸರಿ. ನನ್ನ ತಾಯಿ ಊರಿನಲ್ಲಿ ಕೈಗಡ ಸಾಲ ಮಾಡಿದ್ದಳು ಎಂದರೆ ಸರಿಯಲ್ಲ. ಸದರಿ ಸಾಲದ ಕುರಿತು ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಒಪ್ಪಿ ಕರಾರು ಮಾಡಿಕೊಂಡಿದ್ದಳು ಎಂದರೆ ಸರಿಯಲ್ಲ. ಆ ಕುರಿತು ದಿಳ್ಳೆಪ್ಪ ಮೇವುಂಡಿ ಯವರಿಗೆ ನೊಂದಾಯಿತ ಖರಿದಿ ಕರಾರು ಪತ್ರ ಮಾಡಿ ಕೊಟ್ಟಿದ್ದಳು ಎಂದರೆ ಸರಿ. ಆ ಕಾಲಕ್ಕೆ ದಿಳ್ಳೆಪ್ಪನು 5 ಲಕ್ಷ ಮುಂಗಡ ಹಣವನ್ನು ನನ್ನ ತಾಯಿಗೆ ನೀಡಿದ್ದನು ಎಂದರೆ ಸರಿಯಲ್ಲ. ಖರೀದಿ ಪತ್ರ ಮಾಡಿಕೊಡದ ಕಾರಣ ಆಕೆಗೆ ಕಾನೂನು ನೋಟಿಸು ನೀಡಿ ಓ ಎಸ್ ನಂ 72/2022 ರಂತೆ ದಾವಾ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಮೇಲಿನ ದಾವೆಯ ರಾಜಿ ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿಯ ವಿರುದ್ಧ ಇ ಪಿ ನಂ 137/2023 ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದೂವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.